ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
UNIVERSITY OF AGRICULTURAL SCIENCES, BANGALORE
ಐ.ಸಿ.ಎ.ಆರ್. – ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ತಾಲ್ಲೂಕು, ತುಮಕೂರು
ICAR - KRISHI VIGYAN KENDRA, KONEHALLI, TIPTUR TQ, TUMAKURU

# ಕಲ್ಪವೃಕ್ಷ

e - NEWS LETTER /ಇ –ವಾರ್ತಾ ಪತ್ರಿಕೆ

ಏಪ್ರಿಲ್ ಜೂನ್ 2023

## ಪೂರ್ವ ಮುಂಗಾರು ತಾಂತ್ರಿಕ ಆಂದೋಲನ ಆಚರಣೆ



ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಕೃಷಿ ಸಂಶೋಧನ ಕೇಂದ್ರ, ಕುಣಿಗಲ್ ಹಾಗೂ ತಿಪಟೂರು, ಕೃಷಿ ಇಲಾಖೆ, ಕುಣಿಗಲ್, ಶ್ರೀ. ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಕುಣಿಗಲ್ ಹಾಗೂ ಐ.ಡಿ.ಎಫ್ ಸಂಸ್ಥೆ, ಕುಣಿಗಲ್ ಇವರ ಸಹಯೋಗದಲ್ಲಿ ಕುಣಿಗಲ್‌ನ ಕೃಷಿ ಸಂಶೋಧನ ಕೇಂದ್ರದಲ್ಲಿ ಜೂನ್ 12 ರಂದು ಪೂರ್ವ ಮುಂಗಾರು ತಾಂತ್ರಿಕ ಆಂದೋಲನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ಕೃಷಿ ವಿಶ್ವವಿದ್ಯಾನಿಲಯದ ಸಹಾಯಕ ಕೃಷಿ ನಿರ್ದೇಶಕರಾದ ಡಾ. ಎಂ. ಎಸ್. ಉಮಾ ಉದ್ಘಾಟಿಸಿ ರಾಜ್ಯದಲ್ಲಿ ಮುಂಗಾರು ಮಳೆಯ ಪ್ರವೇಶಕ್ಕೆ ಕ್ಷಣಗಣನೆ ಆರಂಭವಾಗಿದ್ದು, ರೈತರು ಪೂರ್ವ ಮುಂಗಾರಿನ ಸಮಯದಲ್ಲಿ ಕೈಗೊಳ್ಳಬೇಕಾದ ಕಾರ್ಯಚಟುವಟಿಕೆಗಳ ಕುರಿತು, ಸುಧಾರಿತ ತಳಿಗಳ ಲಭ್ಯತೆಯ ಮಾಹಿತಿಗಾಗಿ ಕೃಷಿ ವಿಶ್ವವಿದ್ಯಾನಿಲಯಗೆ ಸೇರಿದ 10 ಜಿಲ್ಲೆಗಳಲ್ಲಿ ಜೂನ್ 12 ರಂದು ಆಂದೋಲನ ಆಯೋಜಿಸಲಾಗಿದೆ ಎಂದರು.

ತಾಲ್ಲೂಕಿನ ಸಹಾಯಕ ಕೃಷಿ ಅಧಿಕಾರಿಗಳಾದ ಶ್ರೀ ನೂರ್‌ಆಜಂ ರೈತರು ಆಧುನಿಕವಾಗಿ ಅಭಿವೃದ್ಧಿ ಪಡಿಸಲು ಸುಧಾರಿತ ತಳಿಗಳು ಹಾಗೂ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಬೇಸಾಯದ ಖರ್ಚನ್ನು ಕಡಿಮೆ ಮಾಡಿಕೊಳ್ಳುವುದರ ಜೊತೆಗೆ ಉತ್ತಮ ಆದಾಯವನ್ನು ಪಡೆಯಬಹುದು ಎಂದರು.

ಇದೇ ಸಮದರ್ಭದಲ್ಲಿ ಐ.ಡಿ.ಎಫ್ ಸಂಸ್ಥೆಯ ಯೋಜನಾಧಿಕಾರಿಗಳಾದ ಶ್ರೀ ಕೆಂಪೇಗೌಡರು "ಸಾವಯವ ಮತ್ತು ಸುಸ್ಥಿರ ಕೃಷಿಯ" ಕುರಿತು ತಾಂತ್ರಿಕ ಅಧಿವೇಶನ ನೀಡುತ್ತಾ ಅಧಿಕ ಪೈರನ್ನು ನಾಟಿ ಮಾಡಿ ಕಡಿಮೆ ಇಳುವರಿ ಹಾಗೂ ಮಣ್ಣಿನ ಫಲವತ್ತತೆಯನ್ನು ಕಡಿಮೆ ಮಾಡುವ ಬದಲು ಕಡಿಮೆ ಪೈರನ್ನು ಶಿಫಾರಸ್ಸು ಮಾಡಿದ ಅಂತರದಲ್ಲಿ ನಾಟಿ ಮಾಡುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚಿಸಬಹುದು ಎಂದರು.

ರಾಷ್ಟ್ರೀಯ ಬೀಜ ಪ್ರಾಯೋಜನೆಯ ಸಹಾಯಕ ಬೀಜೋತ್ಪಾದನಾ ಅಧಿಕಾರಿಗಳಾದ ಡಾ ಬಸವರಾಜ್‌ರವರು ಮುಂಗಾರು ಹಂಗಾಮಿಗೆ ಸೂಕ್ತವಾದ ತಳಿಗಳ ಬಗ್ಗೆ ಅಧಿವೇಶನ ನೀಡುತ್ತಾ ರಾಗಿ ತಳಿಗಳಾದ ಎಂ.ಆರ್–1 , ಎಂ.ಆರ್–6 ಎಂ.ಎಲ್.–365,

ತೊಗರಿ ಬೆಳೆಗಳಾದ ಬಿ.ಆರ್.ಜಿ ತಳಿಗಳಾದ 1, 2, 3 ಹಾಗೂ 5 ಪೂರ್ವ ಮುಂಗಾರಿಗೆ ಸೂಕ್ತವಾದ ತಳಿಗಳು ಬಿ.ಆರ್.ಜಿ–4 ಹಿಂಗಾರಿಗೆ ಸೂಕ್ತ ಎಂದರು.

ಡಾ.ಯೋಗೀಶ್ ಕ್ಷೇತ್ರ ಅಧೀಕ್ಷಕರು, ಕೃಷಿ ಸಂಶೋಧನಾ ಕೇಂದ್ರ, ತಿಪಟೂರುರವರು ಮುಂಗಾರು ಹಂಗಾಮಿಗೆ ಸೂಕ್ತವಾದ ಬೆಳೆ ಪದ್ದತಿಗಳ ಕುರಿತ ಅಧಿವೇಶನದಲ್ಲಿ ಜಿಲ್ಲೆಯಲ್ಲಿ ರಾಗಿ ಮುಖ್ಯ ಆಹಾರ ಬೆಳೆಯಾಗಿದ್ದು, ರೈತರು ಬೆಂಕಿ ರೋಗಕ್ಕೆ ತುತ್ತಾಗುವ ತಳಿಗಳನ್ನು ಏಕ ಬೆಳೆಯಾಗಿ ಉಪಯೋಗಿಸುತ್ತಿದ್ದು ಇದಕ್ಕೆ ಪೂರಕವಾಗಿ ಕಡಿಮೆ ಅವಧಿಯ ಅಲಸಂಧೆ ಹಾಗೂ ರಾಗಿ ಬೆಳೆಯುವುದರಿಂದ ಬೈ ಮಾಡುಲಿಕ್ ಮಳೆಯ ಪ್ರಯೋಜನವನ್ನು ಪಡೆಯಬಹುದು ಎಂದರು.



ಕೃಷಿ ಸಂಶೋಧನಾ ಕೇಂದ್ರದ ಕ್ಷೇತ್ರ ಅಧೀಕ್ಷಿಕರಾದ ಡಾ. ಶ್ರೀನಿವಾಸರವರು ಸಮಗ್ರ ಪೀಡೆ ನಿರ್ವಹಣೆ ಕುರಿತ ಅಧಿವೇಶನದಲ್ಲಿ ಕೀಟ ಮತ್ತು ರೋಗಗಳನ್ನು ಸಾವಯವ ಗಿಡಗಳಾದ ಶುಂಠಿ ಅಸ್ತ್ರ, ಬೇವಿನ ಎಣ್ಣೆ, ಬೇವು ಮತ್ತು ಹೊಂಗೆ ಹಿಂಡಿ ಮುಂತಾದವುಗಳನ್ನು ಬಳಸುವುದರ ಮೂಲಕ ಸಮಗ್ರವಾಗಿ ಹತೋಟಿಯನ್ನು ಪಡೆಯಬಹುದು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಕೇಂದ್ರದ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರಾದ ಡಾ. ವಿ.ಗೋವಿಂದ ಗೌಡರು ಮಾತನಾಡಿ ಏರುತ್ಇರುವ ತಾಪಾಮಾನ ಹಾಗೂ ಬದಲಾಗುತ್ತಿರುವ ವಾತವರಣ ಅನುಗುಣ ಸರಿಯಾಗಿ ಹವಮಾನ ಚತುರ ಕೃಷಿ ಪದ್ಧತಿಗಳನ್ನು ಅನುಸರಿಸುವುದರಿಂದ ಕೃಷಿಯಲ್ಲಿ ಉತ್ತಮ ಆಧಾಯವನ್ನು ಪಡೆಯಬಹುದು ಎಂದರು.

ಕಾರ್ಯಕ್ರಮದ ಅಂಗವಾಗಿ ನೂತನ ತಂತ್ರಜ್ಞಾನ ಹಾಗೂ ನೂತನ ತಳಿಗಳ ಪ್ರದರ್ಶನ ಹಾಗೂ ಮಾರಟವನ್ನು ಕೇಂದ್ರದಲ್ಲಿ ಏರ್ಪಡಿಸಲಾಗಿತ್ತು, ಹಾಗೂ ರೈತ ಮತ್ತು ವಿಜ್ಞಾನಿಗಳ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಶ್ರಿ. ದರ್ಶನ್, ಡಾ. ಕೀರ್ತಿಶಂಕರ್, ಸಂಶೋಧನ ಕೇಂದ್ರದ ಸಿಬ್ಬಂದ್ದಿಗಳು ಹಾಗೂ ವಿವಿಧ ಅಭಿವೃದ್ಧಿ ಇಲಾಖೆಯ ಸಿಬ್ಬಂದಿಗಳು ಸೇರಿದಂತೆ 200ಕ್ಕೂ ಹೆಚ್ಚು ರೈತರು ಬಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದರು.

## ಕೆ.ವಿ.ಕೆ., ಕೊನೇಹಳ್ಳಿ ವತಿಯಿಂದ ತೆಂಗಿನ ತೋಟದಲ್ಲಿ ಅಂತರ ಬೆಳೆಯಾಗಿ ಅಲಸಂಧೆ ಕುರಿತು ಮುಂಚೂಣಿ ಪ್ರಾತ್ಯಕ್ಷಿಕೆ

ಐ.ಸಿ.ಎ.ಆರ್., ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ವತಿಯಿಂದ ತೆಂಗಿನ ತೋಟದಲ್ಲಿ ಅಂತರಬೆಳೆಯಾಗಿ ಅಲಸಂಧೆ ತಳಿ ಕೆ.ಬಿ.ಸಿ–09 ಕುರಿತು ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಯಿತು.

ತೋಟಗಾರಿಕಾ ವಿಜ್ಞಾನಿಗಳಾದ ಡಾ. ಕೀರ್ತಿಶಂಕರ್ ಕೆ.,ರವರು ಮಾತನಾಡಿ ಮುಂಚೂಣಿ ಪ್ರಾತ್ಯಕ್ಷಿಕೆಯ ಮಹತ್ವವನ್ನು ತಿಳಿಸಿದರು. ಮುಂಚೂಣಿ ಪ್ರಾತ್ಯಕ್ಷಿಕೆಯು ನೋಡಿ ತಿಳಿ, ಮಾಡಿ ಕಲಿ ತತ್ವವನ್ನು ಆಧರಿಸಿದ್ದು, ತಂತ್ರಜ್ಞಾನದ ಮೌಲ್ಯವನ್ನು ಬೋಧಿಸಲು ಹಾಗೂ ರೈತರಿಗೆ ಮನದಟ್ಟಾಗುವಂತೆ ಮಾಡಲು ಉಪಯೋಗಿಸುವ ಪ್ರಬಲ ವಿಸ್ತರಣಾ ಭೋಧನ

ವಿದಾನ. ಈ ಪ್ರಾತ್ಯಕ್ಷಿಕೆಯು ವಿಜ್ಞಾನಿಗಳ ಮೇಲ್ವಿಚಾರಣೆಯಲ್ಲಿ ನಡೆಸಲಾಗುವ ಒಂದು ಫಲಿತಾಂಶ ಪ್ರಾತ್ಯಕ್ಷಿಕೆಯಾಗಿದ್ದು, ನೂತನ ತಂತ್ರಜ್ಞಾನಗಳನ್ನು ಜಿಲ್ಲೆಯ ಅಭಿವೃದ್ಧಿ ಇಲಾಖೆಗಳ ಪ್ರಮುಖ ವಿಸ್ತರಣಾ ವ್ಯವಸ್ಥೆ ಪೂರೈಸುವ ಮೊದಲು ಮುಂಚೂಣಿ ಪ್ರಾತ್ಯಕ್ಷಿಕೆಗಳಲ್ಲಿ ಆ ತಂತ್ರಜ್ಞಾನಗಳ ಮೌಲ್ಯ ಮತ್ತು ಸ್ಥಳೀಯ ಅನ್ವಯಿಕತೆ ಪ್ರದರ್ಶಿಸಿಸಲು ಒಂದು ನಿರ್ದಿಷ್ಟ ಪರಿಸರದಲ್ಲಿ ನಡೆಸಲಾಗುವುದು. ಈ ಪ್ರಾತ್ಯಕ್ಷಿಕೆಗಳನ್ನು ತಮ್ಮದೇ ಪರಿಸರದಲ್ಲಿ ನಡೆಸುವುದರಿಂದ ವಿಸ್ತರಣಾ ಕಾರ್ಯಕರ್ತರಿಗೆ ಹಾಗೂ ರೈತರಿಗೆ ತಂತ್ರಜ್ಞಾನಗಳ ಕಾರ್ಯಕ್ಷಮತೆಯನ್ನು ನೇರವಾಗಿ ನೋಡುವ ಹಾಗೂ ವಿಜ್ಞಾನಿಗಳೊಂದಿಗೆ ಸಮಾಲೋಚಿಸಿ ಮನದಟ್ಟು ಮಾಡಿಕೊಳ್ಳುವ ಅವಕಾಶವಿರುತ್ತದೆ ಎಂದು ಕರೆ ಕೊಟ್ಟರು.



ಮುಂದುವರೆದು, ತೆಂಗಿನ ತೋಟದಲ್ಲಿ ಅಲಸಂಧೆಯನ್ನು ಅಂತರ ಬೆಳೆಯಾಗಿ ಬೆಳೆಯುವುದರಿಂದ ಮಣ್ಣಿನ ಫಲವತ್ತೆಯನ್ನು ಹೆಚ್ಚಿಸುವುದರ ಜೊತೆಗೆ ರೈತರಿಗೆ ಆಧಿಕ ಆದಾಯ ಸಿಗುತ್ತದೆ ಎಂದು ತಿಳಿಸಿದ್ದರು. ಕೃಷಿ ವಿಶ್ವವಿದ್ಯಾಲಯ ಬೆಂಗಳೂರುನವರು ಅಭಿವೃದ್ಧಿ ಪಡಿಸಿರುವ ಕೆ.ವಿ.ಸಿ–09 ತಳಿಯು ಗರಿಷ್ಠ ಉತ್ಪಾದಕತೆ ಮಧ್ಯಮ ಅವಧಿ (80–85 ದಿನ) ಮತ್ತು ಕಂದು ಬಣ್ಣದ ಬೀಜವನ್ನು ಹೊಂದಿದೆ ಎಂದು ರೈತರಿಗೆ ಮಾಹಿತಿಯನ್ನು ನೀಡಿದರು.

ಬೇಸಾಯಶಾಸ್ತ್ರ ವಿಜ್ಞಾನಿಗಳಾದ ಡಾ. ಪದ್ಮಾನಾಭ್ ರವರು ರೈತರಿಗೆ ಅಲಸಂಧೆ ಬೆಲೆಯ ಸುಧಾರಿತ ಬೇಸಾಯ ಕ್ರಮಗಳಾದ ತಳಿಗಳ ಬಗ್ಗೆ ಮಾಹಿತಿ ಬಿತ್ತನೆಯ ಸಮಯ ಪೋಷಕಾಂಶಗಳ ನಿರ್ವಹಣೆ ಕೊಯ್ಲು ಮತ್ತು ಇಳುವರಿ ಬಗ್ಗೆ ಮಾಹಿತಿಯನ್ನು ನೀಡಿದರು.

ಶ್ರೀ. ಮನೋಜ್ ಹೆಚ್., ವಿಜ್ಞಾನಿ (ಸಸ್ಯ ಸಂರಕ್ಷಣೆ) ರವರು ಬಿತ್ತನೆ ಬೀಜಗಳನ್ನು ಜೈವಿಕ ಗೊಬ್ಬರವಾದ ರೈಜೋಬಿಯಂ ಜೀವಾಣುವಿನಿಂದ ಬೀಜೋಪಚಾರ ಮಾಡಿದ್ದಾರೆ ಅಧಿಕ ಇಳುವರಿಯನ್ನು ಪಡೆಯಬಹುದು ಎಂದು ರೈತರಿಗೆ ಕರೆ ಕೊಟ್ಟರು.

ಈ ಸಂದರ್ಭದಲ್ಲಿ ನೆರೆದಿದ್ದ ರೈತರಿಗೆ ಬೀಜೋಪಚಾರ ಕುರಿತು ಪದ್ದತಿ ಪ್ರಾತ್ಯಕ್ಷಿತೆಯನ್ನು ನೀಡಲಾಯಿತು ಕಾರ್ಯಕ್ರಮದಲ್ಲಿ ಗ್ರಾಮದ ಪ್ರಗತಿಪರ ರೈತರಾದ ಶ್ರೀ. ಪರಮಶಿವಯ್ಯ ಐ.ಆರ್. ಮತ್ತು ಫಲಾನುಭವಿಗಳು ಉಪಸ್ಥಿತರಿದ್ದರು.

## ವಿಶ್ವ ಪರಿಸರ ದಿನ



ಐ.ಸಿ.ಎ.ಆರ್. ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ಹಾಗೂ ಜೆ. ಫಾರ್ಮ್ ಸರ್ವಿಸಸ್, ತುಮಕೂರು ಇವರ ಸಹಯೋಗದೊಂದಿಗೆ ಕೆ.ವಿ.ಕೆ. ಆವರಣದಲ್ಲಿ ವಿಶ್ವ ಪರಿಸರ ದಿನವನ್ನು "ಪ್ಲಾಸ್ಟಿಕ್ ಮಾಲಿನ್ಯವನ್ನು ಮೆಟ್ಟಿ ನಿಲ್ಲೋಣ" ಎಂಬ ಘೋಷವಾಕ್ಯದೊಂದಿಗೆ ಆಚರಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕೊನೇಹಳ್ಳಿಯ ಪಶುಸಂಗೋಪನೆ ಪಾಲಿಟೆಕ್ನಿಕ್‌ನ ಪ್ರಾಂಶೂಪಾಲರಾದ ಡಾ. ಉಮಾಶಂಕರ್ ಮಾತನಾಡಿ, ಜಗತ್ತಿನಾದ್ಯಂತ ಪ್ರತಿ ವರ್ಷವೂ 430 ಮಿಲಿಯನ್

ಟನ್‌ಗಳಿಗಿಂತ ಹೆಚ್ಚು ಪ್ಲಾಸ್ಟಿಕ್‌ಅನ್ನು ಉತ್ಪಾದಿಸಲಾಗುತ್ತಿದೆ. ಅದರಲ್ಲಿ ಅರ್ಧದಷ್ಟು ಒಮ್ಮೆ ಮಾತ್ರ ಬಳಸಲು ಸಾಧ್ಯವಾಗುತ್ತಿದೆ. ಅಂದಾಜು 20 –25 ಮಿಲಿಯನ್ ಟನ್ ಪ್ಲಾಸ್ಟಿಕ್ ಪ್ರತಿ ವರ್ಷ ಸಮುದ್ರ, ನದಿ ಮತ್ತು ಇತರ ಜಲ ಮೂಲಗಳನ್ನು ಸೇರಿ ಕಲುಷಿತಗೊಳ್ಳುತ್ತದೆ. ಮೈಕ್ರೋಪ್ಲಾಸ್ಟಿಕ್, 5 ಮಿ ಮಿ ವ್ಯಾಸದವರೆಗಿನ ಸಣ್ಣ ಪ್ಲಾಸ್ಟಿಕ್ ಕಣಗಳು ಆಹಾರ, ನೀರು ಮತ್ತು ಗಾಳಿಯಲ್ಲಿ ಸೇರಿ ಹೋಗುತ್ತದೆ. ದೇಶದ ಪ್ರತಿಯೊಬ್ಬ ವ್ಯಕ್ತಿಯು ವರ್ಷಕ್ಕೆ ಅಂದಾಜು 50,000 ಪ್ಲಾಸ್ಟಿಕ್ ಕಣಗಳನ್ನು ಸೇವಿಸುತ್ತಾ ಆರೋಗ್ಯವನ್ನು ಕೆಡಿಸಿಕೊಳ್ಳುತ್ತಿದ್ದಾನೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕೇಂದ್ರದ ಮುಖ್ಯಸ್ಥರಾದ ಡಾ. ವಿ. ಗೋವಿಂದ ಗೌಡರು ಮಾತನಾಡಿ ನಮ್ಮ ಮನುಷ್ಯ ಸಂಕುಲಕ್ಕೆ ಪರಿಸರದ ಪ್ರಾಮುಖ್ಯತೆಯನ್ನು ಅರ್ಥಮಾಡಿಸುವ ಸಲುವಾಗಿ ಜೂನ್ 5 ರಂದು ಪರಿಸರ ದಿನಾಚರಣೆಯನ್ನು ಆಚರಿಸುತ್ತೇವೆ. ಮನುಷ್ಯ ಸಂಕುಲ ಬದುಕಲು ಇರುವುದೊಂದೇ ಭೂಮಿ, ಎಲ್ಲವೂ ಸೊಂಪಾಗಿ ಇದ್ದ ಭೂಮಿ ಇದೀಗ ಅಕಾಲಿಕೆ ಮಳೆಯಿಂದ ಬೆಳೆಗಳು ನಾಶವಾಗುತ್ತಿದೆ. ಹೊಸ ಹೊಸ ರೋಗ ರುಜುನಗಳು ಜೀವ ಹಿಂಡುತ್ತಿದೆ. ಋತುಗಳು ಕಾಲ ತಪ್ಪುತ್ತಿವೆ. ಭೂಗೋಳ ಬಿಸಿಯೇರುತ್ತಿದೆ. ಇದಕ್ಕೆಲ್ಲಾ ಕಾರಣ ಮನುಷ್ಯ ಹಾಗೂ ಅವನ ದುರಾಸೆ. ಪರಿಸರದ ಸಮಸ್ಯೆಗಳನ್ನು ನಾವು ಪರಿಹರಿಸಿದರೆ, ನಮ್ಮ ನೂರಾರು ಸಮಸ್ಯೆಗಳು ಪರಿಹಾರವಾಗುತ್ತವೆ ಎಂದು ಕರೆಕೊಟ್ಟರು. ಕೇಂದ್ರದ ವಿಸ್ತರಣಾ ವಿಜ್ಞಾನಿ ದರ್ಶನ್ ಎಂ.ಈ. ಜೀವನಕ್ಕಾಗಿ ಪ್ರತಿಜ್ಞೆ ಪರಿಸರಕ್ಕಾಗಿ ಜೀವನಶೈಲಿ ಕುರಿತು ಪ್ರತಿಜ್ಞೆ ಸಮಾರಾಂಭವನ್ನು ನೆರವೇರಿಸಿಕೊಟ್ಟರು.




ಈ ಆಚರಣೆಯ ಸಲುವಾಗಿ ಪ್ಲಾಸ್ಟಿಕ್ ಮಾಲಿನ್ಯ ತಡೆಗಟ್ಟುವ ಕ್ರಮಗಳ ಕುರಿತು ಮಕ್ಕಳಿಗೆ ಭಾಷಣ ಸ್ಪರ್ದೆಯನ್ನು ಹಮ್ಮಿಕೊಂಡಿದ್ದು, ಕೊನೇಹಳ್ಳಿಯ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಾದ ಪ್ರಜ್ವಲ್, ಗಗನ, ಆಯುಷ್, ಪ್ರೀತಮ್, ಮತ್ತು ಪ್ರಕೃತಿ ಮೊದಲ 5 ಬಹುಮಾನಗಳನ್ನು ಪಡೆದರು. ಈ ಸಂದರ್ಭದಲ್ಲಿ ಕೆ.ವಿ.ಕೆ. ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು ಹಾಗೂ ಕಾರ್ಯಕ್ರಮದಲ್ಲಿ ಭಾಗವಹಿಸಿದಂತಹ ರೈತರಿಗೆ, ವಿದ್ಯಾರ್ಥಿಗಳಿಗೆ ಸಸಿ ವಿತರಣೆ ಮಾಡಲಾಯಿತು.

ಜೆ. ಫಾರ್ಮ್ ಸರ್ವಿಸಸ್‌ನ ರಾಜ್ಯ ಮುಖಸ್ಥ ಶ್ರೀ. ರುದ್ರಪ್ರತಾಪ್ ಸಿಂಗ್, ಕೃಷಿ ಸಂಶೋಧನ ಕೇಂದ್ರದ ಕ್ಷೇತ್ರ ಅಧೀಕ್ಷರಾದ ಡಾ. ಯೋಗಿಶ್, ಕೇಂದ್ರದ ವಿಜ್ಞಾನಿಗಳಾದ ಡಾ ಶಿವಪ್ಪನಾಯಕ, ಡಾ. ಮನೋಜ್, ಡಾ. ನಿತ್ಯಶ್ರೀ, ಡಾ. ಕೀರ್ತಿಶಂಕರ್, ಡಾ. ಪದ್ಮನಾಭನ್, ಜೆ. ಫಾರ್ಮ್ ಸರ್ವಿಸಸ್‌ನ ತ್ರಿಭುವನ್ ಉಪಸ್ಥಿತರಿದ್ದರು.

## ಸಿರಿಧಾನ್ಯ ಆಂದೋಲನ ಹಾಗೂ ಹವಾಮಾನ ಚತುರ ಕೃಷಿ ತಂತ್ರಜ್ಞಾನಗಳು




ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು, ಇವರ ಸಯುಕ್ತ ಆಶ್ರಯದಲ್ಲಿ ಅಂತರಾಷ್ಟ್ರೀಯ ಸಿರಿಧಾನ್ಯಗಳ ವರ್ಷ –2023ರ ಆಚರಿಸುವ ಸಲುವಾಗಿ, ಕೃಷಿ ವಿಜ್ಞಾನ ಕೇಂದ್ರ ಕೊನೇಹಳ್ಳಿಯಲ್ಲಿ ಸಿರಿಧಾನ್ಯ ಆಂದೋಲನ ಹಾಗೂ ಹವಾಮಾನ ಚತುರ ಕೃಷಿ ತಂತ್ರಜ್ಞಾನಗಳು ಎಂಬ ವಿಷಯದ ಬಗ್ಗೆ ಒಂದು ದಿನದ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು ಈ ಕಾರ್ಯಗಾರವನ್ನು ಡಾ. ಸುಮನಾ ಟಿ, ಎಂ ಆಯುಷ್ ವೈದ್ಯಕೀಯ ಅಧಿಕಾರಿ, ಆಯುಷ್ ಆಸ್ಪತ್ರೆ, ಕೊನೇಹಳ್ಳಿ, ಉಧ್ಘಾಟಿಸಿ ಬದಲಾಗುತ್ತಿರುವ ಜೀವನಶೈಲಿ, ಅತಿಯಾದ ಎಣ್ಣೆ

ಪದಾರ್ಥಗಳ ಸೇವನೆ, ಉಪ್ಪು ಸಕ್ಕರೆಯಿಂದ ತಯಾರಿಸಿದ ಆಹಾರ ಪದಾರ್ಥಗಳನ್ನು ಹೆಚ್ಚು ಸೇವಿಸುವುದರಿಂದ ಅತಿ ಚಿಕ್ಕ ವಯಸ್ಸಿನಲ್ಲಿಯೆ ರಕ್ತದೊತ್ತಡ, ಸಕ್ಕರೆ ಕಾಯಿಲೆ, ಕ್ಯಾನ್ಸರ್ ನಂತಹ ರೊಗಗಳು ಇತ್ತಿಚಿನ ದಿನಗಳಲ್ಲಿ ಕಾಣಿಸಿಕೊಳ್ಳುತ್ತಿದ್ದೆ. ಈ ರೋಗಗಳನ್ನು ನಿಯಂತ್ರಿಸಲು ಸಿರಿಧಾನ್ಯಗಳ ಸೇವನೆ ವರದಾನವಾಗಿದೆ. ಶ್ರೀಯುತ ಸಿದ್ಧರಾಮೇಶ್ವರ, ವೃತ್ತ ನಿರೀಕ್ಷಕರು ಮಾತನಾಡಿ ಹಿಂದೆ ಸಿರಿಧಾನ್ಯ ಬಡವರ ಆಹಾರವಾಗಿತ್ತು ಆದರೆ ಈವಾಗ ಸಿರಿಧಾನ್ಯ ಶ್ರೀಮಂತರ ಆಹಾರವಾಗಿ ಬದಲಾವಣೆಯಾಗಿದೆ, ಈ ಬದಲಾವಣೆಗೆ ಮುಖ್ಯ ಕಾರಣ ಸಿರಿಧಾನ್ಯದಲ್ಲಿರು ಪೌಷ್ಟಿಕ ಗುಣಗಳು ಆದ್ದರಿಂದ ಎಲ್ಲಾರು ಸಿರಿಧಾನ್ಯಗಳನ್ನು ಮಿತವಾಗಿ ಬಳಸುವುದರಿಂದ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷರಾದ ಡಾ. ವಿ. ಗೋವಿಂದ ಗೌಡರು ಮಾತನಾಡಿ ಸಿರಿಧಾನ್ಯದಲ್ಲಿ ಉತ್ತಮ ಪೌಷ್ಟಿಕತೆ ಇದ್ದು ಇದರ ಮಹತ್ವವನ್ನು ಸಾರಲು 2023 ವರ್ಷವನ್ನು ಅಂತರಾಷ್ಟ್ರೀಯ ಸಿರಿಧಾನ್ಯ ವರ್ಷವಾಗಿ ಘೊಷಣೆ ಮಾಡಲಾಗಿದೆ. ಈ ನಿಟ್ಟಿನಲ್ಲಿ ಕೆ.ವಿ.ಕೆ ವತಿಯಿಂದ ರೈತರಿಗೆ ಮಾಹಿತಿಯನ್ನು ನೀಡುಲು ಆನೇಕ ಕಾರ್ಯ ಚಟುವಟಿಕೆಗಳನ್ನು ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿದ್ದು



ರೈತರು ಸಕ್ರಿಯವಾಗಿ ಭಾಗವಹಿಸಿ ಮಾಹಿತಿಯನ್ನು ಪಡೆದುಕೊಳ್ಳಬೇಕೆಂದು ಕರೆ ಕೊಟ್ಟರು ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಡಾ. ಜಯರಾಮಯ್ಯರವರು ಹವಾಮಾನ ಚತುರ ಕೃಷಿ ತಾಂತ್ರಿಕತೆಗಳ ಬಗ್ಗೆ ಕುರಿತು ಅಧಿವೇಶನ ನೀಡಿದರು. ಮತ್ತೋರ್ವ ಸಂಪನ್ಮೂಲ ವ್ಯಕ್ತಿಗಳಾದ ಡಾ. ಪ್ರಭು ಗಾಣಿಗರ್ ಸಿರಿಧಾನ್ಯಗಳ ಮಹತ್ವ ಹಾಗೂ ಉತ್ಪಾದನಾ ತಾಂತ್ರಿಕತೆಗಳ ಕುರಿತು ರೈತ ರೊಂದಿಗೆ ಸಂವಾದ ನಡೆಸಿದ್ದರು. ಈ ಕಾರ್ಯಗಾರದ ಅಂಗವಾಗಿ ರೈತ ಮಹಿಳೆಯರಿಗೆ ಸಿರಿರುಚಿ ಆಹಾರ ಸ್ಪರ್ಧೆ ಮತ್ತು ಪ್ರದರ್ಶನ ಸ್ಪರ್ಧೆಯನ್ನು ಆಯೋಜಿಸಿ, ವಿಜೇತರಿಗೆ ಗಣ್ಯರಿಂದ ಬಹುಮಾನವನ್ನು ವಿತರಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಕೇಂದ್ರದ ವಿಜ್ಞಾನಿಗಳಾದ ಡಾ. ದರ್ಶನ್ ಎಂ. ಈ., ಡಾ. ಮನೋಜ್, ಡಾ. ಕೀರ್ತಿಶಂಕರ್, ಡಾ. ನಿತ್ಯಶ್ರೀ, ಡಾ. ಸತೀಶ್, ಡಾ ಪದ್ಮನಾಭನ್, ಡಾ. ಶ್ರೀಧರಮೂರ್ತಿ ಹಾಗೂ ಇತರೆ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

## ಕೆ.ವಿ.ಕೆ. ಕೊನೇಹಳ್ಳಿ ವತಿಯಿಂದ ರೈತರ ತಾಕುಗಳಲ್ಲಿ ಅಲಸಂಧೆ ಹಾಗೂ ರಾಗಿ ತಳಿಯ ಮುಂಚೂಣಿ ಪ್ರಾತ್ಯಕ್ಷಿಕೆ

ಐ.ಸಿ.ಎ.ಆರ್. ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ವತಿಯಿಂದ ಚಿ.ನಾ. ಹಳ್ಳಿಯ ಹಂದನಕೆರೆಯಲ್ಲಿ ಅಲಸಂಧೆ ಹಾಗೂ ರಾಗಿಯ ನೂತನ ತಳಿಯ ಒಳಗೊಂಡಂತೆ ಎರಡು ಬೆಳೆ ಪದ್ಧತಿಯ ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ನೆಲ ಜಲ ಸಂಸ್ಥೆಯ ಸಹಯೋಗದಲ್ಲಿ ಹಮ್ಮಿಕೊಳ್ಳಲಾಯಿತು.




ಕೆ.ವಿ.ಕೆ.ಯ ವಿಸ್ತರಣಾ ವಿಜ್ಞಾನಿಯಾದ ದರ್ಶನ್ ಮಾತನಾಡಿ ಮುಂಚೂಣಿ ಪ್ರಾತ್ಯಕ್ಷಿಕೆಯ ಮಹತ್ವವನ್ನು ತಿಳಿಸಿದರು. ಮುಂಚೂಣಿ ಪ್ರಾತ್ಯಕ್ಷಿಕೆಯು ನೋಡಿ ತಿಳಿ, ಮಾಡಿ ಕಲಿ ತತ್ವವನ್ನು

ಆಧರಿಸಿದ್ದು, ತಂತ್ರಜ್ಞಾನದ ಮೌಲ್ಯವನ್ನು ಬೋಧಿಸಲು ಹಾಗೂ ರೈತರಿಗೆ ಮನದಟ್ಟಾಗುವಂತೆ ಮಾಡಲು ಉಪಯೋಗಿಸುವ ಪ್ರಬಲ ವಿಸ್ತರಣಾ ಭೋಧನ ವಿದಾನ. ಈ ಪ್ರಾತ್ಯಕ್ಷಿಕೆಯು ವಿಜ್ಞಾನಿಗಳ ಮೇಲ್ವಿಚಾರಣೆಯಲ್ಲಿ ನಡೆಸಲಾಗುವ ಒಂದು ಫಲಿತಾಂಶ ಪ್ರಾತ್ಯಕ್ಷಿಕೆಯಾಗಿದ್ದು, ನೂತನ ತಂತ್ರಜ್ಞಾನಗಳನ್ನು ಜಿಲ್ಲೆಯ ಅಭಿವೃದ್ಧಿ ಇಲಾಖೆಗಳ ಪ್ರಮುಖ ವಿಸ್ತರಣಾ ವ್ಯವಸ್ಥೆ ಪೂರೈಸುವ ಮೊದಲು ಮುಂಚೂಣಿ ಪ್ರಾತ್ಯಕ್ಷಿಕೆಗಳಲ್ಲಿ ಆ ತಂತ್ರಜ್ಞಾನಗಳ ಮೌಲ್ಯ ಮತ್ತು ಸ್ಥಳೀಯ ಅನ್ವಯಿಕತೆ ಪ್ರದರ್ಶಿಸಿಸಲು ಒಂದು ನಿರ್ದಿಷ್ಟ ಪರಿಸರದಲ್ಲಿ ನಡೆಸಲಾಗುವುದು. ಈ ಪ್ರಾತ್ಯಕ್ಷಿಕೆಗಳನ್ನು ತಮ್ಮದೇ ಪರಿಸರದಲ್ಲಿ ನಡೆಸುವುದರಿಂದ ವಿಸ್ತರಣಾ ಕಾರ್ಯಕರ್ತರಿಗೆ ಹಾಗೂ ರೈತರಿಗೆ ತಂತ್ರಜ್ಞಾನಗಳ ಕಾರ್ಯಕ್ಷಮತೆಯನ್ನು ನೇರವಾಗಿ ನೋಡುವ ಹಾಗೂ ವಿಜ್ಞಾನಿಗಳೊಂದಿಗೆ ಸಮಾಲೋಚಿಸಿ ಮನದಟ್ಟು ಮಾಡಿಕೊಳ್ಳುವ ಅವಕಾಶವಿರುತ್ತದೆ.

ಮುಂದುವರೆದು, ತುಮಕೂರು ಜಿಲ್ಲೆಯಲ್ಲಿ ರಾಗಿ ಮುಖ್ಯ ಆಹಾರ ಬೆಳೆಯಾಗಿದ್ದು ರೈತರು ಬೆಂಕಿ ರೋಗಕ್ಕೆ ತುತ್ತಾಗುವ ದೀರ್ಘಾವಧಿ ತಳಿಯನ್ನು ಏಕ ಬೆಳೆಯಾಗಿ ಬೆಳೆಯುತ್ತಿದ್ದಾರೆ. ಎರಡು ಬೆಳೆ ಪದ್ಧತಿಯನ್ನು ಅಳವಡಿಸಿಕೊಳ್ಳಲು ರೈತರು




ಮೇ ನಿಂದ ನವೆಂಬರ್ (7 ತಿಂಗಳು) ವರೆಗಿನ ಮಳೆಯ ಬೈ ಮಾಡುಲರ್ ವಿತರಣೆಯ ಪ್ರಯೋಜನವನ್ನು ಪಡೆಯುತ್ತಿಲ್ಲ. ಈ ನಿಟ್ಟಿನಲ್ಲಿ ಗರಿಷ್ಠ ಉತ್ಪಾದಕತೆ, ಮಧ್ಯವ ಅವಧಿ (80 – 85 ದಿನದ) ಕಂದು ಬಣ್ಣದ ಬೀಜವನ್ನು ಹೊಂದಿರುವ ಅಲಸಂಧೆ ತಳಿಯಾದ ಕೆ.ಬಿ.ಸಿ–9 ಮತ್ತು ಅಲ್ಪಾವಧಿ (95 – 100 ದಿನಗಳ) ಹೆಚ್ಚಿನ ಇಳುವರಿ ಹಾಗೂ ಬೆಂಕಿ ರೋಗ ನಿರೋಧಕ ತಳಿಯನ್ನು (ಕೆ.ಎಂ.ಆರ್. – 316) ಬಳಸಿಕೊಂಡು ಎರಡು ಬೆಳೆ ಪದ್ಧತಿಯನ್ನು ಪ್ರದರ್ಶಿಸುವ ಸಲುವಾಗಿ ಮುಂಚೂಣಿ ಪ್ರಾತ್ಯಕ್ಷಿಕೆ ಅವಶ್ಯಕ ಎಂದರು.

ಡಾ. ಕೀರ್ತಿಶಂಖರ್, ತೋಟಗಾರಿಕಾ ವಿಜ್ಞಾನಿ, ಕೆ.ವಿ.ಕೆ. ಇವರು ಮಾತನಾಡಿ ಇಲ್ಲಿನ ತೆಂಗು ಮತ್ತು ಅಡಕೆ ತೋಟಗಳಲ್ಲಿ ಸಣ್ಣ ಸಣ್ಣ ಕಾಯಿಗಳು ಉದುರುವ ಸಮಸ್ಯೆ ದಿನೇ ದಿನೇ ಹೆಚ್ಚುತ್ತಿದ್ದು, ಲಘು ಪೋಷಕಾಂಷವಾದ ಬೋರಾನ್ ಉಪಚರಿಸುವುದರ ಕಡೆ ಗಮನ ಕೊಡಿ ಎಂದು ಕರೆ ಕೊಟ್ಟರು. ಈ ಸಂದರ್ಭದಲ್ಲಿ ನೆರೆದಿದ್ದ ರೈತರಿಗೆ ಬೀಜೋಪಚಾರ ಹಾಗೂ ಮಣ್ಣು ಮಾದರಿ ತೆಗೆಯುವುದರ ಕುರಿತು ಪದ್ಧತಿ ಪ್ರಾತ್ಯಕ್ಷಿಕೆಯನ್ನು ನೀಡಲಾಯಿತು ಹಾಗೂ ಅಲಸಂಧೆ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಕುರಿತು ಹಸ್ತ ಪ್ರತಿ ಹೊರತರಲಾಯಿತು. ಕೆ. ವಿ. ಕೆ. ಯ ಸಂಜಯ್, ನೆಲಜಲ ಸಂಸ್ಥೆಯ ಶ್ರೀ. ಸುಧಾಕರ್, ಶ್ರೀ. ಸಿದ್ದೇಶ್ ಹಾಗೂ ಫಲಾನುಭವಿಗಳು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ತರಬೇತಿ ಕಾರ್ಯಕ್ರಮಗಳ ವಿವರ

### ಒಳ ಅವರಣ ತರಬೇತಿಗಳು

| ಕ್ರ.. ಸಂ. | ಒಳ ಅವರಣ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|
| 1. | ಘನತಾಜ್ಯ ನಿರ್ವಹಣೆ ಮತ್ತು ಹೈನುಗಾರಿಕೆಯಲ್ಲಿ ಮೇವಿನ ಬೆಳೆ ಉತ್ಪಾದನೆ | 03/04/2023 | 42 |
| 2. | ಸಸ್ಯ ವೈದ್ಯರಾಗಲು ಗ್ರಾಮೀಣ ಯುವಕರ ಸಬಲೀಕರಣ | ಮೇ 2023 | 32 |
| 3. | ಮುಂಗಾರು ಆಂದೋಲನ – ಹವಾಮಾನ ಚತುರ ಕೃಷಿ ತಂತ್ರಜ್ಞಾನಗಳು | ಮೇ 2023 | 103 |

| | | | |
|---|---|---|---|
| 4. | ರಾಗಿಯಲ್ಲಿ ಸಂತಾನೋತ್ಪತ್ತಿ ಪ್ರಕ್ರಿಯೆ | ಮೇ 2023 | 55 |
| 5. | ತೆಂಗಿನಲ್ಲಿ ಸಮಗ್ರ ಪೀಡೆ ನಿರ್ವಹಣೆ | 30/06/2023 | 25 |

**ಹೊರಾವರಣ ತರಬೇತಿಗಳು**

| ಕ್ರ.. ಸಂ. | ವಿಷಯ | ಸ್ಥಳ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|---|
| 1. | ಉದ್ದಿನಲ್ಲಿ ಹಳದಿ ನಂಜು ರೋಗ ನಿರ್ವಹಣೆ | ಪರವಗೊಂಡನಹಳ್ಳಿ | 02/03/2023 | 38 |
| 2. | ಮುಂಗಾರು ಬೆಳೆಗಳ ಸಿದ್ಧತೆ | ಹಂದನಕೆರೆ | 04/03/2023 | 26 |
| 3. | ಬಾಳೆ ಪದಾರ್ಥಗಳ ಬ್ರ್ಯಾಂಡಿಂಗ್ ಮತ್ತು ಪ್ಯಾಕಿಂಗ್ | ತಡಸೂರು | 08/03/2023 | 47 |
| 4. | ನವಣೆ ಡಿ.ಹೆಚ್.ಎಫ್.ಟಿ – 109–3 ನ ಮೌಲ್ಯವರ್ಧಿತ ಪದಾರ್ಥಗಳ ಪದ್ಧತಿ ಪ್ರಾತ್ಯಕ್ಷಿಕೆ | ಅರಳೀಕೆರೆ | 14/03/2023 | 34 |
| 5. | ಅಲಸಂಧೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ | ಬಂದರೆಹಳ್ಳಿ | ಮೇ 2023 | 24 |
| 6. | ಹೈನು ಆಧಾರಿತ ಕೃಷಿ ಪದ್ದತಿಗಳು ಮತ್ತು ಅದರ ಮೌಲ್ಯವರ್ಧನೆ | ಮೈಲನಹಳ್ಳಿ | ಮೇ 2023 | 15 |
| 7. | ಅಲಸಂಧೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ | ಇಪ್ಪಾಡಿ | 17/06/2023 | 12 |

## ಪ್ರಮುಖ ದಿನಗಳು/ ಕಾರ್ಯಕ್ರಮಗಳು

| ಕ್ರ.ಸಂ. | ವಿಷಯ | ಸ್ಥಳ | ದಿನಾಂಕ | ಒಟ್ಟು |
|---|---|---|---|---|
| 1. | ವಿಶ್ವ ಜೇನು ನೊಣ ದಿನ | ಕೃ.ವಿ.ಕೇಂದ್ರ, ಕೊನೇಹಳ್ಳಿ | 20/05/2023 | 38 |
| 2. | ವಿಶ್ವ ಪರಿಸರ ದಿನ | ಕೃ.ವಿ.ಕೇಂದ್ರ, ಕೊನೇಹಳ್ಳಿ | 05/06/2023 | 55 |
| 3. | ವಿಶ್ವ ಪರಿಸರ ದಿನ | ತಡಸೂರು | 05/06/2023 | 40 |
| 4. | ಅಂತರಾಷ್ಟ್ರೀಯ ಯೋಗ ದಿನ | ಕೃ.ವಿ.ಕೇಂದ್ರ, ಕೊನೇಹಳ್ಳಿ | 21/06/2023 | 42 |
| 5. | ಪೂರ್ವ ಮುಂಗಾರು ತಾಂತ್ರಿಕ ಆಂದೋಲನಾ | ಕೃ. ಸಂ. ಕೇಂದ್ರ, ಕುಣಿಗಲ್ | 12/06/2023 | 257 |

## ಸಮಸ್ಯಾತ್ಮಕ ಕ್ಷೇತ್ರ ಭೇಟಿ

| ಕ್ರ. ಸಂ. | ದಿನಾಂಕ | ವಿಷಯ | ಸ್ಥಳ | ಒಟ್ಟು |
|---|---|---|---|---|
| 1 | 29/04/2023 | ಸಮಸ್ಯಾತ್ಮಕ ತೆಂಗಿನ ತಾಕು ಕ್ಷೇತ್ರ ಭೇಟಿ | ದುದ್ದ | 09 |
| 2 | 20/05/2023 | ಪ್ಯುಸರಿಯಂ ಸೊರಗು ರೋಗ ಭಾದಿತ ಬಾಳೆ ತೋಟಕ್ಕೆ ಕ್ಷೇತ್ರ ಭೇಟಿ | ಮೈಲನಹಳ್ಳಿ | 07 |
| 3 | 31/05/2023 | ಚಿಗುರು ಕೊಳೆ ರೋಗ / ಬಡ್ ರಾಟ್ ಭಾದಿತ ತೆಂಗಿನ ತಾಕಿಗೆ ಕ್ಷೇತ್ರ ಭೇಟಿ | ಪಟ್ರೇಹಳ್ಳಿ | 08 |
| 4 | 31/05/2023 | ಮೊಳಕೆಯೊಡೆಯುವಿಕೆ ತೊಂದರೆ ಭಾದಿತ ಶುಂಠಿ ತಾಕಿಗೆ ಕ್ಷೇತ್ರ ಭೇಟಿ | ಮೈಲನಹಳ್ಳಿ | 08 |
| 5 | 09/06/2023 | ಸಮಸ್ಯಾತ್ಮಕ ಬಾಳೆ ತೋಟ ಕ್ಷೇತ್ರ ಭೇಟಿ | ಮೈಲನಹಳ್ಳಿ | 12 |
| 6 | 14/06/2023 | ಸಮಸ್ಯಾತ್ಮಕ ಮೇವಿನ ಬೆಳೆ ತಾಕು ಕ್ಷೇತ್ರ ಭೇಟಿ | ಹೊನ್ನವಳ್ಳಿ | 08 |

## ಪದ್ದತಿ ಪ್ರಾತ್ಯಕ್ಷಿಕೆ

| ಕ್ರ. ಸಂ. | ದಿನಾಂಕ | ವಿಷಯ | ಸ್ಥಳ | ಒಟ್ಟು |
|---|---|---|---|---|
| 1. | 18/05/2023 | ರೈಜೋಬಿಯಂನಿಂದ ಬೀಜೋಪಚಾರ ಪದ್ಧತಿ ಪ್ರಾತ್ಯಕ್ಷಿಕೆ | ಕೃ.ವಿ.ಕೇಂದ್ರ, ಕೊನೇಹಳ್ಳಿ | 14 |
| 2. | 18/05/2023 | ಮಣ್ಣಿನ ಮಾದರಿ ಸಂಗ್ರಹಣೆಯ ಪದ್ಧತಿ ಪ್ರಾತ್ಯಕ್ಷಿಕೆ | ಕೃ.ವಿ.ಕೇಂದ್ರ, ಕೊನೇಹಳ್ಳಿ | 10 |
| 3. | 17/06/2023 | ಮಣ್ಣಿನ ಮಾದರಿ ಸಂಗ್ರಹಣೆಯ ಪದ್ಧತಿ ಪ್ರಾತ್ಯಕ್ಷಿಕೆ | ಕೃ.ವಿ.ಕೇಂದ್ರ, ಕೊನೇಹಳ್ಳಿ | 12 |
| 4. | 17/06/2023 | ಅಲಸಂಧೆ ಬೀಜೋಪಚಾರ ಪದ್ಧತಿ ಪ್ರಾತ್ಯಕ್ಷಿಕೆ | ಇಪ್ಪಾಡಿ, ಕುಣಿಗಲ್ | 20 |

**ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು:**
**ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು,**
**ಐ.ಸಿ.ಎ.ಆರ್ –ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು, ತುಮಕೂರು ಜಿಲ್ಲೆ**